

# ದೌರ್ಜನ್ಯ ಮೆಟ್ಟಿ ನಿಂತ ಕಿರಣ್

■ ರಾಹುಲ ಬೆಳಗಲಿ

'ಜನಪರ, ರೈತಪರ ಮತ್ತು ನ್ಯಾಯಯುತ ಹಕ್ಕಿಗಾಗಿ ಎಲ್ಲಿಯೇ ಹೋರಾಟ–ಪ್ರತಿಭಟನೆ ನಡೆದಿರಲಿ, ಅಲ್ಲಿ ಹೋಗುತ್ತೇನೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಇರುವ ಸಾಂವಿಧಾನಿಕ ಹಕ್ಕುಗಳು ಎಲ್ಲರಿಗೂ ಸಿಗಬೇಕು ಎಂಬ ಆಶಯ ನನ್ನದು. ಪ್ರತಿಭಟನೆಯ ಕಾವು ಸರ್ಕಾರಕ್ಕೆ ಬಿಸಿ ಮುಟ್ಟಿಸದಿದ್ದರೆ, ಕಾನೂನಾತ್ಮಕ ಹೋರಾಟ ಮಾಡಲು ನಾನು ಹಿಂಜರಿಯುವುದಿಲ್ಲ. ಅದಕ್ಕಾಗಿ ಬದುಕನ್ನು ಸಮರ್ಪಿಸಿಕೊಂಡಿದ್ದೇನೆ. ಹಕ್ಕುಗಳ ಬಗ್ಗೆ ಜನರಲ್ಲಿ ಜಾಗೃತಿಯೂ ಮೂಡಿಸುತ್ತೇನೆ'.

ಹೀಗೆ ಹೇಳುವ ಕಿರಣ್ ನಾಯಕ್ ತಮ್ಮ ಮಾತಿಗೆ ಬದ್ಧರಾಗಿ ಉಳಿದುಕೊಂಡವರು. ನುಡಿದಂತೆ ನಡೆದವರು. ಹಾಗಂತ ದಿಢೀರನೇ ಎಲ್ಲರಂತೆ, ಎಲ್ಲಿ ಬೇಕೆಂದಲ್ಲಿ ಸುಲಭವಾಗಿ ಹೋಗಲು ಆಗುವುದಿಲ್ಲ. ಅವರ ಕಾಲುಗಳು ಸ್ವಾಧೀನದಲ್ಲಿ ಇಲ್ಲ. ಮನೆಯಲ್ಲಿ ಅಲ್ಲದೇ ಹೊರಗಡೆ ಓಡಾಡಲು ಅವರು ಗಾಲಿಕುರ್ಚಿಯನ್ನು ಅವಲಂಬಿಸಿದ್ದಾರೆ. ಸದ್ಯಕ್ಕೆ ಚಿಕ್ಕಬಳ್ಳಾಪುರದಲ್ಲಿ ನೆಲೆಸಿರುವ ಅವರು, ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ರಾಜ್ಯವಲ್ಲದೇ ದೇಶವ್ಯಾಪಿ ಸಂಚರಿಸುತ್ತಾರೆ.

ತೆಲಂಗಾಣ ರಾಜ್ಯದ ವಾರಂಗಲ್ ಊರಿನ ಹನುಮಾನ್ ತಾಂಡಾದಲ್ಲಿ ಬಂಜಾರ ಬುಡಕಟ್ಟು ಸಮುದಾಯದ ಬಡ ಕುಟುಂಬದಲ್ಲಿ 1986ರ ಜನವರಿ 1ರಂದು ಜನಿಸಿದ ಕಿರಣ್ ನಾಯಕ್ ಅವರಿಗೆ ಪೋಲಿಯೊ ಸಮಸ್ಯೆಯಿಂದ ಮೂರನೇ ವಯಸ್ಸಿನಲ್ಲೇ ಅಂಗವೈಕಲ್ಯ ಬಾಧಿಸಿತು. ಆದರೆ, ಅವರು ಧೃತಿಗೆಡಲಿಲ್ಲ. ಓಡಾಡಲು ಪ್ರಯಾಸಪಟ್ಟರು. ವರ್ಷಗಳು ಕಳೆದಂತೆ ಜಾತಿ, ಅಂಗವೈಕಲ್ಯ, ಲಿಂಗ ತಾರತಮ್ಯ, ಶೋಷಣೆ, ಬಡತನದಿಂದ ಬೇರೆ ಬೇರೆ ಸ್ವರೂಪದಲ್ಲಿ ನಲುಗಿದರು. ಆದರೆ, ಇದೆಲ್ಲವನ್ನೂ ಮೀರಿ ಆತ್ಮವಿಶ್ವಾಸದಿಂದ ಅವರು ನಿಧಾನವಾಗಿ ಬದುಕು ಕಟ್ಟಿಕೊಂಡರು.

ಶಿಕ್ಷಕರೊಬ್ಬರ ನೆರವಿನಿಂದ ಶಿಕ್ಷಣ ಪಡೆದರು. ಹೆಣ್ಣಾಗಿ ಜನಿಸಿದರೂ 12ನೇ ವಯಸ್ಸಿನಿಂದ ಅವರು ಗಂಡಾಗಿ ಗುರುತಿಸಿಕೊಳ್ಳತೊಡಗಿದರು. 18ನೇ ವಯಸ್ಸಿಗೆ ಕುಟುಂಬ, ಊರು ಎಲ್ಲವನ್ನೂ ತೊರೆದು ಚಿಕ್ಕಬಳ್ಳಾಪುರದಲ್ಲಿ ನೆಲೆ ಕಂಡುಕೊಂಡರು. ಕನ್ನಡ ಕಲಿತರು. ಇಂಗ್ಲಿಷ್ ಮತ್ತು ಹಿಂದಿಯನ್ನೂ ಮಾತನಾಡಲು ಪ್ರಯತ್ನಿಸಿದರು. ಅಂಗವಿಕಲರನ್ನು ಒಟ್ಟುಗೂಡಿಸಿ, ಕರ್ನಾಟಕ ವಿಕಲಚೇತನ ಸಂಘಟನೆ ಕಟ್ಟಿದರು. ಹಕ್ಕುಗಳಿಗಾಗಿ ಹೋರಾಡಿದರು.

2012ರಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆಯುತ್ತಿದ್ದ ಶಾಶ್ವತ ನೀರಾವರಿ ಹೋರಾಟದಲ್ಲಿ ಪಾಲ್ಗೊಂಡರು. ಇದರ ಜೊತೆಜೊತೆಯಲ್ಲೇ ಇಡೀ ಜಿಲ್ಲೆಯಲ್ಲಿ ಅಂಗವಿಕಲರ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸಿದರು. ಜಿಲ್ಲಾಡಳಿತದ ನೆರವು ಪಡೆದರು. ಶಾಸಕರು, ಸಂಸದರು ಮತ್ತು ಸಚಿವರ ಮೇಲೆ ಒತ್ತಡ ಹೇರಿ, ಅಂಗವಿಕಲರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಅಗತ್ಯ ಆರ್ಥಿಕ ನೆರವು, ಸೌಕರ್ಯಗಳು ಸಿಗುವಂತೆ ಮಾಡಿದರು.

ಜಿಲ್ಲಾ ವ್ಯಾಪ್ತಿಯಲ್ಲಿ ಇಷ್ಟನ್ನೇ ಮಾಡಿಕೊಂಡು, ಅವರು ಸುಮ್ಮನಿರಬಹುದಿತ್ತು. ಆದರೆ, ಮನಸ್ಸು ಒಪ್ಪಲಿಲ್ಲ. 'ಹಲವು ಸ್ವರೂಪದಲ್ಲಿ ಶೋಷಣೆ, ದೌರ್ಜನ್ಯಕ್ಕೆ ಒಳಗಾಗುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರು ಇಡೀ ರಾಜ್ಯ, ದೇಶದಲ್ಲಿ ಇದ್ದಾರೆ. ಸರ್ಕಾರಿ ಸೌಲಭ್ಯಗಳನ್ನು ಅಷ್ಟನ್ನೇ ನೆಚ್ಚಿಕೊಂಡರೆ ಸಾಲದು, ಅವರು ಸ್ವಾವಲಂಬಿ ಬದುಕು ಕಂಡುಕೊಳ್ಳಬೇಕು. ಸಮಾಜದ ಮುಖ್ಯವಾಹಿನಿಗೆ ಬರಬೇಕು' ಎಂದು ಪಣ ತೊಟ್ಟರು. ಇದಕ್ಕೆ ಪೂರಕವಾಗಿ ನಿಸರ್ಗ ಸೊಸೈಟಿ ಎಂಬ ಸಂಘ ಕಟ್ಟಿದರು. ಸಂಘದಲ್ಲಿ ಎಲ್ಲರಿಗೂ ಸದಸ್ಯತ್ವ ನೀಡಿ, ಸ್ವಯಂ–ಉದ್ಯೋಗ ತರಬೇತಿ ಶಿಬಿರ ನಡೆಸಿದರು. ಚಿಕ್ಕಬಳ್ಳಾಪುರ ಜಿಲ್ಲೆಯವರು ಅಲ್ಲದೇ ರಾಜ್ಯದ ವಿವಿಧೆಡೆ ಇರುವವರಿಗೂ ನೆರವಾದರು.

'ಲಿಂಗತ್ವ ಅಲ್ಪಸಂಖ್ಯಾತರಿಗೂ ಈ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಅವರು ನೈಸರ್ಗಿಕವಾಗಿ ಹುಟ್ಟಿದ್ದಾರೆ ಹೊರತು ಅಪರಾಧವೇನೂ ಮಾಡಿಲ್ಲ. ಆದರೆ, ಅವರನ್ನು ಮನೆಯಲ್ಲಿ ಕುಟುಂಬ ಸದಸ್ಯರು ಹೊರಗಡೆ ಹೋಗದಂತೆ ತಡೆಯುತ್ತಾರೆ. ಚುಚ್ಚುಮಾತುಗಳಿಂದ ಹೀಯಾಳಿಸುತ್ತಾರೆ. ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಾರೆ. ಇದೆಲ್ಲವನ್ನೂ ಸಹಿಸಲಾಗದೇ ಕೆಲವರು ನೋವು ಅನುಭವಿಸುತ್ತಲೇ ಪ್ರಾಣ ಕಳೆದುಕೊಳ್ಳುತ್ತಾರೆ. ಅವರಿಗೆ ಸೂಕ್ತ ಮಾಹಿತಿ, ಮಾರ್ಗದರ್ಶನ ಅಗತ್ಯವಿದೆ ಎಂಬುದು ಕುಟುಂಬ ಸದಸ್ಯರು ಅಷ್ಟೇ ಅಲ್ಲ, ಸಮಾಜವು ಅರ್ಥ ಮಾಡಿಕೊಳ್ಳಬೇಕು' ಎನ್ನುತ್ತಾರೆ ಕಿರಣ್ ನಾಯಕ್.

ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ಆರಂಭಿಸಿದಾಗ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂಥವರು ನೂರಾರು ಸಂಖ್ಯೆಯಲ್ಲಿ ಸಿಕ್ಕರು. ಸಮೀಕ್ಷೆ ಆರಂಭಿಸಿದಾಗ, ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರಿಗೆ ಸುಭದ್ರ ಮತ್ತು ನೆಮ್ಮದಿಯ ಬದುಕು ಸಿಕ್ಕಿಲ್ಲ ಎಂಬುದು ಅರಿವಿಗೆ ಬಂತು. ಅವರೊಂದಿಗೆ ಹೆಜ್ಜೆಯಿಡುತ್ತಾ, ಅವರ ಬದುಕನ್ನು ಸುಧಾರಿಸಲು ಮತ್ತು ಆತ್ಮವಿಶ್ವಾಸ ಮೂಡಿಸಲು ಪಣ ತೊಟ್ಟಿದ್ದಾರೆ.

ಅಂಗವಿಕಲರ ಕ್ಷೇತ್ರದಲ್ಲಿನ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಕಿರಣ್ ನಾಯಕ್ ಅವರಿಗೆ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿದೆ. ರಾಷ್ಟ್ರಮಟ್ಟದ ಹೆಲೆನ್ ಕೆಲ್ಲೆರ್ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 'ಅಸಹಕಾರ, ನಿಂದನೆ, ಸಂಕಷ್ಟ ಈಗಲೂ ನನ್ನನ್ನು ಕಾಡುತ್ತಿವೆ. ಬದುಕಿನ ಕೊನೆಯ ಉಸಿರು ಇರುವವರೆಗೆ ಅವು ಇರುತ್ತವೆ. ಅವುಗಳನ್ನು ಸವಾಲು ಆಗಿ ಸ್ವೀಕರಿಸಿ, ಸಂಗಾತಿಯಾಗಿ ಪರಿವರ್ತಿಸಿಕೊಳ್ಳದೇ ಅನ್ಯ ಮಾರ್ಗವಿಲ್ಲ. ಖಿನ್ನತೆಯಲ್ಲೇ ಇಡೀ ಜೀವನ ಕಳೆಯುವ ಬದಲು ನಗುನಗುತ್ತಲೇ ಬದುಕು ಕಟ್ಟಿಕೊಳ್ಳಬೇಕು ಎಂಬ ಗುರಿ ನನ್ನದು' ಎನ್ನುವ ಕಿರಣ್ ಯಾವಾಗಲೂ ನಗುಮುಖದಲ್ಲೇ ಕಾಣಸಿಗುತ್ತಾರೆ. ನಿರಾಸೆಯ ಛಾಯೆ ಆವರಿಸಲು ಅವಕಾಶ ನೀಡುವುದಿಲ್ಲ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65